ಅಂಗಡಿ ಜೋಡಿಸುವುದು ಎಲ್ಲ ಕೆಲಸಗಳ ಜವಾಬ್ದಾರಿ ಹೊತ್ತುಬಿಡುತ್ತಿದ್ದರು. ರಜೆಯ ದಿನವಾದರೆ, ಅವರ ಮಕ್ಕಳ ಸಮೇತ ಸಹಾಯಕ್ಕೆ ಹಾಜರಿರುತ್ತಿದ್ದರು. ಬದುಕಿನ ಏರುಪೇರಿನಲ್ಲಿಯೂ ನೀತಾ ತಮ್ಮ ಸ್ನೇಹವೃಂದವನ್ನು ಉಳಿಸಿ ಬೆಳೆಸಿಕೊಂಡಿದ್ದರು. ಈ ವೃಂದ ಪ್ರತಿ ಪ್ರದರ್ಶನದಲ್ಲಿ ಇವರಿಗೆ ಎಲ್ಲಿಲ್ಲದ ಸಹಾಯ ನೀಡಲು ಪ್ರಯತ್ನಿಸುತ್ತಿತ್ತು. ಅವರ ವಿಶಾಲ ಹೃದಯ ಭಾವೇಶ್ ಅವರ ತಂಡದ ಮನಸ್ಸನ್ನು ಸೂರೆಗೊಂಡಿತ್ತು.

ಇವೆಲ್ಲ ಪ್ರದರ್ಶನಗಳು ಸನ್‌ರೈಸ್ ಕ್ಯಾಂಡಲ್ಸ್ ಅಭಿವೃದ್ಧಿಗೊಳ್ಳಲು ಸಹಾಯಕವಾದವು. ಈ ಎಲ್ಲ ಪ್ರದರ್ಶನಗಳ ಮೂಲಕ, ಇಷ್ಟೆಲ್ಲಾ ಸ್ಪರ್ಧೆಯ ಯುಗದಲ್ಲಿ, ತಮ್ಮ ಕಾಲ ಮೇಲೆ ನಿಲ್ಲುವುದು, ವಿಕಾಸಗೊಂಡು ಪ್ರಗತಿಯ ಹಾದಿಯಲ್ಲಿ ಮುನ್ನಡೆಯುವುದು ಸಾಧ್ಯವಾಗಿತ್ತು. ಪ್ರತಿಯೊಂದು ಪ್ರದರ್ಶನದಲ್ಲಿ ಭಾಗವಹಿಸುವುದು ರಣರಂಗಕ್ಕೆ ಹೋಗಿ ಬಂದಷ್ಟೇ ಕಷ್ಟದ್ದು, ಪರಿಶ್ರಮದ್ದೂ ಆಗಿತ್ತು. ಪ್ರತಿ ಪ್ರದರ್ಶನದಲ್ಲಿ ಗ್ರಾಹಕರೊಡನೆ ಇಡೀ ದಿನ, ಸತತವಾಗಿ ತಮ್ಮ ಪ್ರಾಡಕ್ಟ್ ಬಗ್ಗೆ ಬೇಸರವಿಲ್ಲದೆ ಮಾತನಾಡಬೇಕಿತ್ತು. ಅದು ಮುಗಿದಾಗ, ಒಂದು ವಾಕ್ಯ ಹೇಳಲೂ ದೇಹದಲ್ಲಿ ತಾಕತ್ತು ಉಳಿದಿರುತ್ತಿರಲಿಲ್ಲ. ಅಷ್ಟು ಆಯಾಸವಾಗಿರುತ್ತಿತ್ತು. ಯಶಸ್ಸಿಗೆ ಪರಿಶ್ರಮದ ಹೊರತು ಬೇರೊಂದು ಹಾದಿಯಿಲ್ಲ ಎಂದು ಭಾವೇಶ್ ಗಟ್ಟಿಯಾಗಿ ನಂಬಿದ್ದರು. ಇಂತಹ ಪ್ರದರ್ಶನಗಳು ನಿಂಬುಮೆಣಸಿನಕಾಯಿ ಕಟ್ಟಿ ಅದೃಷ್ಟವನ್ನು ಅವಲಂಬಿಸಿ ಸಫಲವಾಗುವುದಿಲ್ಲ.

* * *

ಇಷ್ಟೆಲ್ಲ ಪ್ರದರ್ಶನಗಳಲ್ಲಿ, ಗೋವಾದ ಒಂದು ಪ್ರದರ್ಶನ ಮಾತ್ರ ಭಾವೇಶ್ ಆಗಲೀ, ನೀತಾ ಆಗಲಿ ಮರೆಯಲು ಸಾಧ್ಯವಿಲ್ಲ. ನಂಬಿಕೊಂಡ ಗೆಳೆಯರು ಕೈಕೊಟ್ಟಾಗಲೂ ನಿಭಾಯಿಸಿ ಬಂದ ದುಃಸ್ವಪ್ನದಂತಹ ಅನುಭವ ಅದು. ದಿನಾಂಕ 10 ಮತ್ತು 11 ಏಪ್ರಿಲ್ 2011ರಂದು ಪುಣೆಯ ಆರ್ಕಿಡ್ ಹೋಟೆಲಿನಲ್ಲಿ ಕಾರ್ಯಕ್ರಮವೊಂದು ನಿಯೋಜಿತವಾಗಿತ್ತು. 11ನೇ ತಾರೀಕಿನ ಕಾರ್ಯಕ್ರಮದಲ್ಲಿ ತತ್ಕಾಲೀನ ಮುಖ್ಯಮಂತ್ರಿಗಳಾದ ಪೃಥ್ವಿರಾಜ ಚೌಹಾನ್ ಅವರು ಮಾತನಾಡಲಿದ್ದರು. ಹಾಗೂ ಅದೇ ಕಾರ್ಯಕ್ರಮದಲ್ಲಿ ಭಾವೇಶ್ ಅವರು ಮುಖ್ಯಮಂತ್ರಿಗಳಿಂದ ಪುರಸ್ಕಾರವನ್ನು ಸ್ವೀಕರಿಸಲಿದ್ದರು. ಕಾರ್ಯಕ್ರಮಕ್ಕೆ ಸ್ವಲ್ಪ ದಿನಗಳಿಗೆ ಮೊದಲು ರಿಲಯನ್ಸ್‌ನ 'ದೃಷ್ಟಿ ಫೌಂಡೇಷನ್'ನ ಪದಾಧಿಕಾರಿಯೊಬ್ಬರು ಫೋನ್ ಮಾಡಿ, 'ದಿನಾಂಕ 8 ಏಪ್ರಿಲ್‌ನಿಂದ 10 ಏಪ್ರಿಲ್ ಗೋವಾದ ವೈಟ್ ಸ್ಯಾಂಡ್ ರಿಸಾರ್ಟ್‌ನಲ್ಲಿ ನಡೆಯಲಿರುವ ಸಮಾರೋಪದಲ್ಲಿ ದೇಶದ ಬಹಳಷ್ಟು ಉದ್ಯೋಗಪತಿಗಳು ಮತ್ತು ಪತ್ರಿಕೋದ್ಯಮಿಗಳು ಬಂದಿರುತ್ತಾರೆ. ನನ್ನ ಬಳಿ ಹತ್ತು ಉಚಿತ ಪಾಸ್‌ಗಳಿವೆ. ನೀವು ಅಲ್ಲಿ ಹೋಗಿ ನಿಮ್ಮ ಮೋಂಬತ್ತಿಗಳ ದೊಡ್ಡ ಪ್ರದರ್ಶನವನ್ನು ಹಾಕಬೇಕೆಂಬುದು ನಮ್ಮ ಇಚ್ಛೆ' ಎಂದರು. ಜೊತೆಗೇ 'ಈ ಪಾಸುಗಳ ಬೆಲೆ 12,000 ರೂಪಾಯಿ ಇರುವುದರಿಂದ ಊಟ, ತಿಂಡಿ ಎಲ್ಲದರ ವ್ಯವಸ್ಥೆ ಅದರಲ್ಲಿಯೇ ಮಾಡಿದ್ದಾರೆ. ನೀವು ನಿಮ್ಮ ಪ್ರಯಾಣ ಮತ್ತು ವಸತಿಯ ವ್ಯವಸ್ಥೆ ನೋಡಿಕೊಂಡರೆ ಸಾಕು' ಎಂದೂ ಹೇಳಿದರು. ಇಂತಹ ಒಳ್ಳೆಯ ಅವಕಾಶ ಕಲ್ಪಿಸಿಕೊಟ್ಟದ್ದಕ್ಕೆ ಭಾವೇಶ್ ಅವರಿಗೆ ಧನ್ಯವಾದ ಹೇಳಿದರು. ತಾವು ಗೋವಾಕ್ಕೆ ಹೋಗಿ ಪ್ರದರ್ಶನ ಹಾಕಿ, 10ನೇ ತಾರೀಕು ರಾತ್ರಿ ಅಲ್ಲಿಂದ ಹೊರಟು, 11ರ ಬೆಳಗ್ಗೆ ಪುಣೆಗೆ ತಲುಪಿ ಮುಖ್ಯಮಂತ್ರಿಗಳಿಂದ ಪುರಸ್ಕಾರ ಸ್ವೀಕರಿಸುವುದು ಎಂದು ಯೋಜಿಸಿದರು.

ಮಹಾಬಲೇಶ್ವರದಲ್ಲಿ ಹೋಟೆಲ್ ಮಾಲೀಕರಾಗಿದ್ದ ಕೆಲವು ಮಿತ್ರರು ಭಾವೇಶ್ ಅವರಲ್ಲಿಗೆ ಆಗಮಿಸಿದ್ದರು. ಮಾತು ಮಾತಿನ ನಡುವೆ ಗೋವಾಕ್ಕೆ ಹೋಗುತ್ತಿರುವ ವಿಷಯ ತಿಳಿಸಿದಾಗ ಅವರಲ್ಲಿ ಇಬ್ಬರು, ತಮ್ಮ ಪತ್ನಿಯೊಡನೆ ಬರಲು ತುಂಬಾ ಉತ್ಸುಕರಾದರು. ನಿಮ್ಮ ಪ್ರದರ್ಶನದ ಸಂಪೂರ್ಣ ಜವಾಬ್ದಾರಿ ನಮ್ಮದು ಎಂದರು. ಭಾವೇಶ್ ಅವರು ಗೋವಾದಲ್ಲಿದ್ದ ತಮ್ಮ ಇಬ್ಬರು ಸ್ನೇಹಿತರಿಗೆ ಆಹ್ವಾನ ಕಳುಹಿಸಿದ್ದರು. ಅವರು ತಮ್ಮ ಪತ್ನಿಯರ ಜೊತೆಯಲ್ಲಿ ಪ್ರದರ್ಶನಕ್ಕೆ ಸಹಾಯ ಮಾಡಲಿದ್ದರು. ಅವರು ಗೋವಾದಲ್ಲಿ



ಭಾವೇಶ್‌ರ ಅಂಧಮಿತ್ರರು ರೂಪಿಸಿರುವ ಮೇಣದ ಪ್ರತಿಮೆಗಳು